1583ನೆ ಮು (222)
4ff
16/04/2…

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

---

**ಸೂಚನೆ:**

ವಿನೋಬನಗರ ವ್ಯಾಪ್ತಿಗೆ ಸೇರಿರುವ ಶ್ರೀರಾಮ ನಗರದಲ್ಲಿ ಕೆ.ಎಸ್.ಐ.ಡಿ.ಸಿ ವ್ಯಾಪ್ತಿಗೆ ಒಳಪಡುವ ಜಾಗದಲ್ಲಿ 1988 ರಿಂದ ಸುಮಾರು 124 ಮನೆಗಳಲ್ಲಿ ಬಡವರು ಕೂಲಿಕಾರ್ಮಿಕರು ವಾಸಮಾಡುತ್ತಿದ್ದಾರೆ. ಇವರು ಎಲ್ಲ ಮೂಲ ಸೌಲಭ್ಯ ಪಡೆದಿರುತ್ತಾರೆ. ಇವರುಗಳಿಗೂ ಯಾವುದೇ ದಾಖಲೆಗಳು ಇರುವುದಿಲ್ಲ. ಆದ್ದರಿಂದ ಇವರುಗಳಿಗೆ ಹಕ್ಕು ಸ್ವಾದೀನ ಪತ್ರ ನೀಡುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಶಿವಮೊಗ್ಗ ಮಹಾನಗರ ಪಾಲಿಕೆಯ ವಿನೋಬನಗರ ವ್ಯಾಪ್ತಿಗೆ ಸೇರಿರುವ ಶ್ರೀರಾಮ ನಗರದಲ್ಲಿ ಕೆ.ಎಸ್.ಐ.ಡಿ.ಸಿ ಬಡಾವಣೆಯ ಪಕ್ಕದಲ್ಲಿರುವ ಶಿವಮೊಗ್ಗ ತಾಲ್ಲೂಕು ಶ್ರೀಗಂಧ ಕಾವಲು ಸರ್ವೆ ನಂ: 01 ರ ಜಾಗದಲ್ಲಿ 124 ಮನೆಗಳು ಯಾವುದೇ ಮಂಜೂರಾತಿ ಅಥವಾ ಸರ್ಕಾರದ ಅನುಮೋದನೆ ಇಲ್ಲದೇ ಅರಣ್ಯ ಇಲಾಖೆಯ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿಕೊಂಡಿರುವ ಮನೆಗಳಾಗಿರುತ್ತವೆ. ಮೈಸೂರು ರಾಜ್ಯಪತ್ರ ಸಂಖ್ಯೆ: 3038 /Ft 153 Date: 20.09.1897 ರಲ್ಲಿ (ಪುಟಸಂಖ್ಯೆ 486) "ಆಲ್ಕೊಳ ಶ್ರೀಗಂಧ ಕಾವಲು ರಿಸರ್ವ್" ಎಂದು 116.5 ಎಕರೆ ಜಾಗವನ್ನು ರಾಜ್ಯ ಅರಣ್ಯ ಎಂದು ಸೆಕ್ಷನ್ 09 of the Forests rules of 1978 ಅನುಸಾರ ಘೋಷಿಸಿರುವುದರಿಂದ, ಶಿವಮೊಗ್ಗ ಮಹಾನಗರ ಪಾಲಿಕೆ ವತಿಯಿಂದ ಹಕ್ಕು ಸ್ವಾಧೀನ ಪತ್ರ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

---

**ಕಡತ ಸಂಖ್ಯೆ: ನಅಇ 16 ಶಿಮಪಾ 2026 (ಇ)**

(ಬಿ.ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು